ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ

**ಉಪಸ್ಥಿತಿ: ಶ್ರೀ ಈಶಪ್ಪ ಕೆ. ಭೂತೆ, ಬಿ. ಎ. ಎಲ್.ಎಲ್. ಬಿ. (ಸ್ಪೇಶಲ್.)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾವೇರಿ.**

ದಿನಾಂಕ **12** ನೇ ಎಪ್ರೀಲ್ **2018.**

ಸ್ಪೇಷಲ್ ಎಸ್.ವಿ.ಸಿ.ನಂಃ**1:2017**

ಪಿರ್ಯಾದುದಾರ : ಕರ್ನಾಟಕ ಸರ್ಕಾರ,
ಲೋಕಾಯುಕ್ತ ಪಿ.ಎಸ್. ಪ್ರತಿನಿಧಿಸುವವರು ಸರಕಾರಿ
ಅಭಿಯೋಜಕರು, ಹಾವೇರಿ.

-ವಿರುದ್ಧ-

ಆರೋಪಿ ನಂ.1: ರಾಜಾಭಕ್ಷ ತಂದೆ ಗರೀಬಸಾಬ ಗುಡಗೇರಿ,
ವಯಸ್ಸುಃ 64 ವರ್ಷ, ಉಃ ನಿವೃತ್ತ ಸರ್ಕಾರಿ ಉದ್ಯೋಗಿ,
ಹಾಲಿ ವಸ್ತಿಃ ಬಸ್ತಿ ಗಲ್ಲಿ, ಹಾವೇರಿ. ತಾಃಜಿಲ್ಲಾಃ ಹಾವೇರಿ.

*(ಶ್ರೀ ಉಮೇಶ ಎನ್ ಗೌಳಿ ವಕೀಲರು.)*

**ಆರೋಪಿ ಕಲಂ 239 ಜೊತೆಗೆ 227 ಸಿ.ಆರ್.ಪಿ.ಸಿ. ಅಡಿಯಲ್ಲಿ ವಿಮುಕ್ತಿ ಕೋರಿ ಸಲ್ಲಿಸಿದ ಅರ್ಜಿ ಮೇಲೆ ಆದೇಶ**

ಕಡತ ಪರಶೀಲಿಸಿದಾಗ ಆರೋಪಿ ರಾಜ್ಯ ಸರ್ಕಾರದ ಕೃಷಿ ಹಾಗೂ ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ 1975 ನೇ ಇಸ್ವಿಯಿಂದ ಸೇವೆಗೆ ಸೇರಿ ಕಾರ್ಯ ನಿರ್ವಹಣೆ ಮಾಡುತ್ತಿದ್ದು ಇನ್ನು ಮುಂದೆ ಅನುಕೂಲಕ್ಕಾಗಿ "ಆರೋಪಿ" ಅಂತ ಕರೆಯಲಾಗುತ್ತದೆ. ಆ ಅವಧಿಯಿಂದ ದಿನಾಂಕ 22.03.2013 ರವರೆಗಿನ ಅವಧಿಯಲ್ಲಿ ತಮ್ಮ ಘೋಷಿತ ನೈಜ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಂಪಾದನೆ ಮಾಡಿ ಆಸ್ತಿಗಳನ್ನು ಸಂಪಾದಿಸಿದ್ದಾರೆ ಅಂತ ತಮಗೆ ಬಂದ ಮಾಹಿತಿಯನ್ನು ಆಧರಿಸಿ ಹಾವೇರಿಯ ಲೋಕಾಯುಕ್ತ ಪೋಲಿಸರು ನಿಯಮಾಳಿಗಳಂತೆ ಮೇಲಾಧಿಕಾರಿಗಳ ಅನುಮತಿ ಪಡೆದು ಆರೋಪಿಯ ಮನೆ ಮತ್ತು ಆಸ್ತಿಗಳ ಮೇಲೆ ದಾಳಿ ಮಾಡಿ ಅವರು ಗಳಿಸಿದ ಆಸ್ತಿಗಳನ್ನು ಜಪ್ತಿ ಮಾಡಿ ಅವುಗಳಿಗೆ ಮಾರುಕಟ್ಟೆ ಬೆಲೆ ನಿಗದಿಮಾಡಿ ಆರೋಪಿ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಮುಕ್ತಾಯ ಆದ ಮೇಲೆ ಆರೋಪಿ ತಮ್ಮ ಘೋಷಿತ ಆಸ್ತಿಕ್ಕಿಂತ 38.79% ರಷು ಅಸಮತೋಲನ ಆಸ್ತಿಯನ್ನು ತನ್ನ, ತನ್ನ ಪತ್ನಿ ಹಾಗೂ ಮಕ್ಕಳ ಹೆಸರಿನಲ್ಲಿ ಹೊಂದಿರುವುದು ಸಿದ್ದಪಟ್ಟಿದೆ ಅಂತ ಹೇಳಿ

ಲೋಕಾಯುಕ್ತ ಪೋಲಿಸರು ಆರೋಪಿ ವಿರುದ್ಧ ಕಲಂ 13 (1) (ಇ) ಜೊತೆಗೆ 13 (2) ಪಿ.ಸಿ. ಕಾಯ್ದೆ 1988 ಅಡಿಯಲ್ಲಿ ದೋಷಾರೋಪಣೆ ಪತ್ರ ಸಲ್ಲಿಸಿದ್ದಾರೆ

2. ಸದರಿ ದೋಷಾರೋಪಣೆ ಪತ್ರ ಹಾಗೂ ಅದರೊಂದಿಗೆ ಸಲ್ಲಿಸಿರುವ ಎಲ್ಲಾ ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಲಾಗಿ ಮೇಲ್ನೊಟಕ್ಕೆ ಸಾಕ್ಷಾಧಾರಗಳು ಆರೋಪಿಯ ಮೇಲೆ ಕಂಡುಬಂದಿರುವುದರಿಂದ ನ್ಯಾಯಾಲಯದ ಸಂಜ್ಞೆ ತೆಗೆದುಕೊಂಡು ಸ್ಪೇಷಲ್ ಎಸ್.ವಿ.ಸಿ. 1:2017 ಅಂತ ದಾಖಲಿಸಿಕೊಂಡು ಆರೋಪಿ ಹಾಜರಾತಿ ಪಡೆಯಲಾಗಿದೆ. ಆರೋಪಿಯು ಶ್ರೀ ಯು.ಎನ್.ಗೌಳಿ ವಕೀಲರ ಮೂಲಕ ಹಾಜರಾಗಿ ಜಾಮೀನು ಮೇಲೆ ಬಿಡುಗಡೆ ಹೊಂದಿದ್ದಾನೆ. ಆಪಾದನೆ ಪತ್ರದ ನಕಲು ಮತ್ತು ದಾಖಲಾತಿಗಳನ್ನು ಒದಗಿಸಲಾಗಿದೆ.

3. ಕಲಂ 17 ಪಿ.ಸಿ. ಕಾಯ್ದೆ ಅಡಿ ಲೋಕಾಯುಕ್ತ ಎಸ್ .ಪಿ. ರವರು ತನಿಖಾಧಿಕಾರಿಯಾಗಿ ಈ ಪ್ರಕರಣವನ್ನು ನಿರ್ವಹಿಸಿಕೊಂಡು ತನಿಖೆ ಮಾಡಲು ನೀಡಿರುವ ಆದೇಶ ಸರಿ ಮತ್ತು ನ್ಯಾಯಯುತ ಆಗಿಲ್ಲ, ಆ ಕಾರಣದಿಂದಾಗಿ ತನಿಖಾಧಿಕಾರಿ ಶ್ರೀ ಎಂ.ಕೆ.ಗಂಗಲ್ ರವರು ಕೈಗೊಂಡಿರುವ ಪೂರ್ತಿ ತನಿಖೆ ದೋಷಪೂರಿತವಾಗಿದೆ. ತಾವು ಸಂಪಾದನೆ ಮಾಡುವ ಕಾಲಕ್ಕೆ ಪಡೆದ ಸಾಲದ ಲೆಕ್ಕಗಳನ್ನು ಸ್ವತ್ತುಗಳ ಮೌಲ್ಯ ನಿಗದಿ ಮಾಡುವಾಗ ತನಿಖಾಧಿಕಾರಿ ಸರಿಯಾಗಿ ಲೆಕ್ಕ ಹಾಕಿಲ್ಲಾ. ಆ ನಿಯಮಾವಳಿ 23 ಕೆ.ಸಿ.ಎಸ್.ಆರ್. ನಿಯಮಾವಳಿ ಅಡಿ ಇಲಾಖೆ ಸಲ್ಲಿಸಿದ ಆಸ್ತಿಗಳ ಮಾಹಿತಿಯನ್ನು ತನಿಖಾಧಿಕಾರಿ ಸರಿಯಾಗಿ ಗಮನಿಸಿ ಲೆಕ್ಕ ಹಾಕಿಲ್ಲಾ. ಆ ಕಾರಣದಿಂದ ಅವರ ತನಿಖೆ ದೋಷಪೂರಿತಾಗಿದೆ. ತಮ್ಮ ಕಟ್ಟಡ ಇಮಾರತ್ತುಗಳ ಮೌಲ್ಯ ನಿಗದಿ ಮಾಡುವಾಗ ತನಿಖಾಧಿಕಾರಿ ಸರಿಯಾಗಿ ಮಾನದಂಡ ಅನುಸರಿಸಿಲ್ಲ. ಆ ಕಟ್ಟಡ ಕಟ್ಟುವಾಗ ಇಲಾಖೆಯಿಂದ ಪಡೆದ ಪರವಾನಿಗೆಯಲ್ಲಿ ಆ ಸ್ವತ್ತುಗಳ ಮೌಲ್ಯ ತೋರಿಸಿದ್ದು ಅದನ್ನು ಸಹ ಅವರು ಸರಿಯಾಗಿ ಗಮನಿಸಿಲ್ಲ. ಆಸ್ತಿಗಳ ಮೌಲ್ಯವನ್ನು ಕಟ್ಟಡ ನಿರ್ಮಾಣ ಪೂರ್ತಿ ಆದ ಮೇಲೆ ಸಂಬಂಧಿಸಿದವರು ನೀಡುವ ಕಂಪ್ಲೆಷನ್ ಸರ್ಟಿಫಿಕೇಟ್ ಸಮಯದಿಂದ ಪರಿಗಣಿಸಬೇಕು, ಆದರೆ ಆ ನಿಯಮಾವಳಿಗಳನ್ನು ತನಿಖಾಧಿಕಾರಿ ಗಮನಿಸಿಲ್ಲ. ಈ ಎಲ್ಲಾ ಸಂಗತಿಗಳನ್ನು ಒಟ್ಟಾರೆ ಅವಲೋಕಿಸಿದಾಗ ಆರೋಪಿ ನಿರಪರಾಧಿ ಅನ್ನುವುದು ಸಿದ್ದವಾಗಿರುತ್ತದೆ. ಈ ಎಲ್ಲಾ ಕಾರಣದಿಂದ ಅವರ ಮೇಲೆ ಸಲ್ಲಿಸಿದ ದೋಷಾರೋಪಣೆ ಆಧಾರರಹಿತವಾಗಿದೆ ಅಂತ ಹೇಳಿ ಆ ಎಲ್ಲಾ ಸಂಗತಿಗಳನ್ನು ಈ ಹಂತದಲ್ಲಿ ಈ ನ್ಯಾಯಾಲಯದ ಗಮನಕ್ಕೆ ತೆಗೆದುಕೊಂಡು ಆರೋಪಿ ಮೇಲೆ ದೋಷಾರೋಪಣೆ ಹೊರಿಸಲು ಪೂರಕವಾದ ಸಾಕ್ಷಾಧಾರಗಳು ಇಲ್ಲ ಅಂತ ನಿರ್ಣಯಿಸಿ ಆರೋಪಿಯನ್ನು ಬಂಧನ ಮುಕ್ತಗೊಳಿಸಲು ಆದೇಶ ಮಾಡಬೇಕೆಂದು ಕೋರಿ ಆರೋಪಿ ಪರ ವಕೀಲರು ಕಲಂ 239 ಜೊತೆಗೆ ಕಲಂ 227 ಸಿ.ಆರ್.ಪಿ.ಸಿ. ಅಡಿ ಅರ್ಜಿ ಸಲ್ಲಿಸಿದ್ದಾರೆ.

4. ಮಾನ್ಯ ವಿಶೇಷ ಅಭಿಯೋಜಕರಾದ ಶ್ರೀ ಹುಳಪ್ಪಲ್ಯ ರವರು ಸದರಿ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ ಆ ಅರ್ಜಿಯಲ್ಲಿ ಯಾವುದೇ ನೈಜ ಸಂಗತಿಗಳು ಇಲ್ಲ ಅಂದಿದ್ದಾರೆ. ತನಿಖಾಧಿಕಾರಿ ತನಿಖೆ ಮಾಡಲು ಅಧಿಕಾರಸ್ಥ ಇದ್ದು ಅವರು ಹೊಂದಿದ ಅಧಿಕಾರ ನಾತೆಯಿಂದ ಹಾಗೂ ತಮಗೆ ಬಂದ ಮಾಹಿತಿಯನ್ನು ಆಧರಿಸಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಸರ್ಕಾರಿ ನೌಕರಸ್ಥರನ್ನು ಪಂಚರನ್ನಾಗಿ ಇಟ್ಟುಕೊಂಡು ದಾಳಿ ಮಾಡಿ ಆಸ್ತಿ ಮತ್ತು ವಸ್ತುಗಳನ್ನು ವಶಪಡಿಸಿಕೊಂಡು ತನಿಖೆ ಮುಂದುವರೆಸಿ ಎಲ್ಲಾ ಸಾಕ್ಷಾಧಾರಗಳನ್ನು ಸಂಗ್ರಹ ಮಾಡಿ ಆರೋಪಿಯ ಮೇಲೆ ಮೇಲ್ನೋಟಕ್ಕೆ ಆರೋಪಗಳು ಸಿದ್ಧಪಟ್ಟಿವೆಯೆಂದು ಈ ದೋಷಾರೋಪಣೆ ಪತ್ರವನ್ನು ಸಲ್ಲಿಸಲಾಗಿದೆ ಕೇವಲ ಕಾಲ್ಪನಿಕ ಹಾಗೂ ಅಸತ್ಯತೆಯಿಂದ ಕೂಡಿರುವ ಸಂಗತಿಗಳನ್ನು ಹೇಳಿ ದುರುದ್ದೇಶದಿಂದ ಈ ಅರ್ಜಿ ಸಲ್ಲಿಸಿದ್ದು ಅದು ಕಾನೂನಿನ ಅಡಿ ಊರ್ಜಿತವಾಗುವುದಿಲ್ಲ. ಆರೋಪಿಗೆ ದಂಡ ವಿಧಿಸಿ ಅವರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿದ್ದಾರೆ.

5. ಸದರಿ ಅರ್ಜಿಯ ಮೇಲೆ ಉಭಯತರ ವಾದ ವಿವಾದಗಳನ್ನು ಕೇಳಿ ದೋಷಾರೋಪಣೆ ಪತ್ರವನ್ನು ಹಾಜರುಪಡಿಸಿದ್ದು, ಎಲ್ಲಾ ಸಾಕ್ಷಾಧಾರಗಳನ್ನು ಪರಿಶೀಲಿಸಲಾಗಿದೆ.

6. ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆ.

1. ಅಭಿಯೋಜಕರು ಹಾಜರು ಮಾಡಿದ ಸಾಕ್ಷಾಧಾರಗಳನ್ನು ಗಮನಿಸಿದಾಗ ಆರೋಪಿ ಮೇಲಿರುವ ಆಪಾದನೆಗಳು ಆದಾಯ ರಹಿತವಾಗಿವೆ ಹಾಗೂ ಮೇಲ್ನೋಟಕ್ಕೆ ಕಂಡುಬರುವ ಯಾವುದೇ ಸಾಕ್ಷಾಧಾರಗಳು ಇಲ್ಲವೆಂದು ಈ ಪ್ರಕರಣದ ವಿಚಾರಣೆ ಮುಂದುವರೆಸುವಲ್ಲಿ ಯಾವುದೇ ಅರ್ಥ ಇಲ್ಲ ಕಾರಣ ತನ್ನನ್ನು ಸದರಿ ಆಪಾದನೆಯಿಂದ ವಿಮುಕ್ತಿಗೊಳಿಸಬೇಕು ಅಂತ ಆರೋಪಿ ಈ ನ್ಯಾಯಾಲಯಕ್ಕೆ ಮನವರಿಕೆ ಮಾಡಿ ಕೊಟ್ಟಿದ್ದಾರೆಯೇ ?

2. ಅರ್ಜಿಯಲ್ಲಿ ತಿಳಿಸಿದ ದೋಷಾರೋಪಣೆ ಪತ್ರದಲ್ಲಿ ಹೇಳಿರುವ ಆಪಾದನೆಗಳಿಂದ ವಿಮುಕ್ತಿ (discharge) ಹೊಂದಲು ಆರೋಪಿ ಅರ್ಹನಿದ್ದಾನೆಯೇ ?

3. ನನ್ನ ಆದೇಶ?

7. ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

1 ಮತ್ತು 2 :ನಕರಾತ್ಮಕ

3. ಮೇಲಿನಂತೆ ಆದೇಶ

ಕಾರಣಗಳು

8. **1 ಮತ್ತು 2:** ಈ ಎರಡು ಅಂಶಗಳನ್ನು ಅನುಕೂಲಕ್ಕಾಗಿ ಒಂದೇ ಚರ್ಚೆ ಅಡಿಯಲ್ಲಿ ನಿರ್ಣಯಿಸಲು ನಿರ್ಧರಿಸಿದ್ದೇನೆ.

9. ತನಿಖಾಧಿಕಾರಿ - ಹಾವೇರಿ ಲೋಕಾಯುಕ್ತ ಪೋಲಿಸ್ ಅಧಿಕಾರಿ, ತಮಗೆ ಬಂದ ಮಾಹಿತಿಯನ್ನು ಆಧರಿಸಿ ಆರೋಪಿಯ ವಿರುದ್ಧ ಈ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಮಾಡಿ ದೋಷಾರೋಪಣೆ ಪತ್ರ ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಅಂತಹ ಪ್ರಕರಣವನ್ನು ದಾಖಲಿಸಿ ತನಿಖೆ ಮಾಡಲು ಕಲಂ 17 ಪಿ.ಸಿ ಕಾಯ್ದೆ ಅಡಿ ಹೇಳಿದಂತೆ ತಮ್ಮ ಮೇಲಾಧಿಕಾರಿಯಿಂದ ಆದೇಶ ಪಡೆದುಕೊಂಡು ಈ ಪ್ರಕರಣದ ತನಿಖೆ ಕೈಗೊಂಡಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತದೆ. ಇಬ್ಬರು ಸರ್ಕಾರಿ ನೌಕರರನ್ನು ಪಂಚರನ್ನಾಗಿ ಇಟ್ಟುಕೊಂಡು ತಮ್ಮ ಸಿಬ್ಬಂದಿಯ ಸಮೇತ ತನಿಖಾಧಿಕಾರಿ ಶ್ರೀ ಎಂ.ಕೆ.ಗಂಗಲ್ ರವರು ಆರೋಪಿಯ ಮನೆ ಮತ್ತು ಸ್ವತ್ತುಗಳ ಮೇಲೆ ದಾಳಿ ಮಾಡಿ ಅವುಗಳ ಮೌಲ್ಯವನ್ನು ನಿಯಮಾವಳಿಗಳಂತೆ ತಯಾರಿಸಿ ಸಾಕ್ಷ್ಯವಾಗಿ ಸಂಗ್ರಹಿಸಿರುವುದು ಸಹ ಕಂಡುಬರುತ್ತದೆ ಆರೋಪಿ ಕಟ್ಟಿಸಿದ ಕಟ್ಟಡಗಳ ಮೌಲ್ಯ ಮಾಪನವನ್ನು ನಿಯಮಾವಳಿಗಳಂತೆ ಮಾಡಿ ಅವುಗಳ ಮೌಲ್ಯವನ್ನು ತೋರಿಸಿರುವುದು ಸಹ ಕಂಡುಬರುತ್ತದೆ. ಈ ಎಲ್ಲಾ ಸಂಗತಿಗಳ ಬಗ್ಗೆ ತನಿಖಾಧಿಕಾರಿ ಸಾಕಷ್ಟು ದಾಖಲೆ ಮತ್ತು ಮೌಖಿಕ ಸಾಕ್ಷಾಧಾರಗಳನ್ನು ಸಂಗ್ರಹಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ದೋಷಾರೋಪಣೆ ಪತ್ರದೊಂದಿಗೆ ಹಾಜರು ಪಡಿಸಿದ ಆ ಎಲ್ಲಾ ಸಾಕ್ಷಾಧಾರಗಳನ್ನು ಸೂಕ್ಷ್ಮವಾಗಿ ಓದಿದಾಗ ಆರೋಪಿ ಮೇಲೆ ಹೊರಿಸಿದ ಆಪಾದನೆಗಳಿಗೆ ಪೂರಕವಾಗಿ ಮೇಲ್ನೋಟಕ್ಕೆ ಸಾಕ್ಷಾಧಾರಗಳು ಕಂಡು ಬರುತ್ತದೆ. ಆ ಕಾರಣದಿಂದಾಗಿ ತನ್ನ ಮೇಲೆ ಹೊರಿಸಲಾದ ಆಪಾದನೆಗಳು ಆಧಾರ ರಹಿತ ಅನ್ನುವ ಆರೋಪಿಯ ಕೋರಿಕೆ ಈ ಹಂತದಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ.

10. ತಮ್ಮ ಮೇಲಾಧಿಕಾರಿಯಿಂದ ಪಡೆದಿರುವ ಅನುಮತಿ ಆದೇಶ ನಿಯಮಾವಳಿ ಬದ್ಧವಾಗಿದೆಯೋ ಅಥವಾ ಇಲ್ಲವೋ, ತನಿಖಾಧಿಕಾರಿ ಆರೋಪಿಯ ಸ್ವತ್ತುಗಳ ಬಗ್ಗೆ ಲೆಕ್ಕ ಹಾಕಿರುವ ಮೌಲ್ಯ ಮಾಪನ ಸರಿಯಾಗಿ ಇದೆಯೋ ಅಥವಾ ಇಲ್ಲವೋ ಅನ್ನುವುದನ್ನು ಕಂಡುಕೊಳ್ಳಲು ಪೂರ್ಣ ಪ್ರಮಾಣದ ಸಾಕ್ಷಾಧಾರಗಳ ವಿಚಾರಣೆ ಆಗಬೇಕಾಗಿರುತ್ತದೆ. (Full pledged trial) ಆರೋಪಿಯ ಕಟ್ಟಡಗಳ ಮೌಲ್ಯ ಮಾಪನವನ್ನು ಯಾವ ರೀತಿ ಮಾಡಬೇಕು ಅನ್ನುವುದನ್ನು ಮತ್ತು ತನಿಖಾಧಿಕಾರಿ ಮಾಡಿದ ಕಟ್ಟಡಗಳ ಮೌಲ್ಯ ಮಾಪನ ನಿಯಮಬದ್ಧವಾಗಿದೆಯೋ ಅಥವಾ ಇಲ್ಲವೋ ಅನ್ನುವುದನ್ನು ಸಹ ಪೂರ್ಣ ಪ್ರಮಾಣದ ಸಾಕ್ಷಿ ವಿಚಾರಣೆಯಲ್ಲಿ ನಂತರ ಕಂಡುಕೊಳ್ಳಬಹುದಾಗಿದೆ. ತನಿಖಾಧಿಕಾರಿ ಮಾಡಿರುವ ಮೌಲ್ಯ ಮಾಪನ ಅಥವಾ ತನಿಖಾಧಿಕಾರಿಯು ಅನುಸರಿಸಿದ ರೀತಿಯಲ್ಲಿ ನ್ಯೂನತೆ ಅಥವಾ ಲೋಪದೋಷಗಳಿದ್ದರೆ ಅಂತಹ ಸಂಗತಿಗಳ ಲಾಭವನ್ನು ಸಾಕ್ಷಿ ವಿಚಾರಣೆ ಹಾಗೂ

ತೀರ್ಪು ನೀಡುವಾಗ ಆರೋಪಿ ಪಡೆಯಬಹುದಾಗಿದೆ. ದೋಷಾರೋಪಣೆ ರಚಿಸಿರುವ ಹಂತದಲ್ಲಿ ಈ ಎಲ್ಲಾ ಸಂಗತಿಗಳನ್ನು ಅವಲೋಕಿಸಿ full pledged trial ನಂತೆ ವಿಚಾರಣೆ ಮಾಡಲು ಆಗುವುದಿಲ್ಲ. Even if there are any lacunas or loop holes in the investigation conducted by the IO then the accused is at liberty to take the advantage of those lacunas during the course of trial of the case. At this of stage framing of charge all those aspects cannot be looked into by way of mini trial.

11. ಮೇಲೆ ಹೇಳಿದ ಕಾರಣಗಳಿಗಾಗಿ ತನ್ನ ಮೇಲೆ ಹೊರಿಸಿರುವ ಆಪಾದನೆಗಳು ಆಧಾರ ರಹಿತವಾಗಿವೆ ಕಾರಣ ತನ್ನನ್ನು ಸದರಿ ಆಪಾದನೆಗಳಿಂದ ವಿಮುಕ್ತಿಗೊಳಿಸಬೇಕು ಅನ್ನುವ ಆರೋಪಿಯ ಕೋರಿಕೆಯನ್ನು ಈ ಹಂತದಲ್ಲಿ ಪರಿಗಣಿಸಲಾಗುವುದಿಲ್ಲ ಅಂತ ಅಭಿಪ್ರಾಯ ಪಟ್ಟಿದ್ದೇನೆ. ಅಭಿಯೋಜಕರು ಹಾಜರು ಪಡಿಸಿರುವ ಎಲ್ಲಾ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಓದಿದಾಗ ಆರೋಪಿಯ ಮೇಲೆ ಮೇಲ್ನೋಟಕ್ಕೆ ಕಂಡುಬರುವ ಸಾಕಷ್ಟು ಸಾಕ್ಷಾಧಾರಗಳು ಇರುವುದರಿಂದ ದೋಷಾರೋಪಣೆ ಪತ್ರದಲ್ಲಿ ಹೇಳಿದಂತೆ ಅವರ ವಿರುದ್ಧ ದೋಷಾರೋಪಣೆ ರಚಿಸುವುದು ಸೂಕ್ತ ಅಂತ ಅಭಿಪ್ರಾಯ ಪಟ್ಟು 1 ಮತ್ತು 2 ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

12. <u>ಅಂಶಃ**3:**</u> 1 ಮತ್ತು 2 ಅಂಶಗಳಿಗೆ ನಾನು ನೀಡಿದ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತೇನೆ.

<u>ಆದೇಶ</u>

ಕಲಂ 239 ಜೊತೆಗೆ 227 ಸಿ.ಆರ್.ಪಿ.ಸಿ. ಅಡಿ ವಿಮುಕ್ತಿ (discharge) ಕೋರಿ ಆರೋಪಿ ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಲಾಗಿದೆ.

ಅವರ ವಿರುದ್ಧ ಕಲಂ 13 (1)(ಇ) ಜೊತೆಗೆ 13(2) ಪಿ.ಸಿ. ಕಾಯ್ದೆ 1988 ಅಡಿ ದೋಷಾರೋಪಣೆ ಪತ್ರ ರಚಿಸಲು ಮೇಲ್ನೋಟಕ್ಕೆ ಕಂಡುಬರುವ ಪೂರಕವಾದ ಸಾಕ್ಷಾಧಾರಗಳು ಇರುವುದರಿಂದ ಸದರಿ ಆಪಾದನೆಗಳ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಲು ನಿರ್ಧರಿಸಿದ್ದೇನೆ.

(ಶೀಘ್ರಲಿಪಿಗಾರಳಿಗೆ ಉಕ್ತಲೇಖನವನ್ನು ನೀಡಿ, ಅವರಿಂದ ತರ್ಜುಮೆ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 12 ನೇ ಏಪ್ರಿಲ್ 2018 ರಂದು ಘೋಷಿಸಲಾಯಿತು.)

(ಈಶಪ್ಪ ಕೆ. ಭೂತೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ

(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)ಸಿ

ಆದೇಶ

ಕಲಂ 239 ಜೊತೆಗೆ 227 ಸಿ.ಆರ್.ಪಿ.ಸಿ. ಅಡಿ ವಿಮುಕ್ತಿ (discharge) ಕೋರಿ ಆರೋಪಿ ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಲಾಗಿದೆ.

ಅವರ ವಿರುದ್ಧ ಕಲಂ 13 (1)(ಇ) ಜೊತೆಗೆ 13(2) ಪಿ.ಸಿ. ಕಾಯ್ದೆ 1988 ಅಡಿ ದೋಷಾರೋಪಣೆ ಪತ್ರ ರಚಿಸಲು ಮೇಲ್ನೋಟಕ್ಕೆ ಕಂಡುಬರುವ ಪೂರಕವಾದ ಸಾಕ್ಷಾಧಾರಗಳು

ಇರುವುದರಿಂದ ಸದರಿ ಆಪಾದನೆಗಳ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಲು ನಿರ್ಧರಿಸಿದ್ದೇನೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ